ಅಸಲು ದಾವಾ  ನಂಃ 50/2018

ಪಿ.ಡಬ್ಲೂ

**4 ನೇ  ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ  ರವರ ನ್ಯಾಯಾಲಯ ಧಾರವಾಡ.**

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **01.07.2026**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ.   ವಕೀಲರಿಂದ**

1. 1 ರಿಂದ 8, 19, 20, 23 ಇವರು ಒಂದೆ ಕುಟುಂಬದ ಸದಸ್ಯರು ಎಂದರೆ ಸರಿ. ಪ್ರತಿವಾದಿ ನಂ.8, 19, 20 ಮತ್ತು 23 ಇವರು  ಮರಾಠಾ ಜಾತಿಗೆ ಸೇರಿದವರು ಎಂದರೆ ಸರಿ. ನವಲೂರು ಗ್ರಾಮ ಕಾರ್ಪೊರೇಷನ ವ್ಯಾಪ್ತಿಯಲ್ಲಿ ಇದೆ ಎಂದರೆ ಸರಿ. ನವಲೂರು ಗ್ರಾಮದಲ್ಲಿ 2 ವಾರ್ಡಗಳು ಇವೆ.  1 ವಾರ್ಡಗೆ ಮೋಹನ ಮೋರೆ  , ಇನ್ನೊಂದು ವಾರ್ಡಿಗೆ ಮಂಜುನಾಥ ಕಾರ್ಪೊರೇಟರ ಇರಬಹುದು.

2. ಈ ದಾವಾ ಇತ್ಯರ್ಥಕ್ಕೆ ಬಾಕಿ ಇದ್ದಾಗ ಮಂಜುನಾಥ  ಇವರು ದಾವಾ ಆಸ್ತಿಗಳ ಪೈಕಿ 1 ನೇ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಕ್ರಯದ ಕರಾರು ಪತ್ರ ಬರೆಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.  ಈ ವಿಷಯ ಗೊತ್ತಿದ್ದರೂ, ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಈ ದಿನ ನಾನು ಮಂಜುನಾಥ ಇವರು ಒಟ್ಟಿಗೆ ಕೋರ್ಟಿಗೆ ಬಂದಿದ್ದೇವೆ ಎಂದರೆ ನಾನು ಬಸ್ ನಲ್ಲಿ ಬಂದಿದ್ದೇನೆ.

3. ಪಿಡಬ್ಲೂ 3 ರವರ ಮನೆ ನನ್ನ ಮನೆ ಹತ್ತಿರ ಇದೆ ಎಂದರೆ ಸಾಕ್ಷಿಯು ನಮ್ಮ ಮನೆಗಳು ದೂರ ಇವೆ. ಪಿಡಬ್ಲೂ 3 ರವರು ಸಂಚಗಾರ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಂಚಗಾರ ಪತ್ರ ಮಾಡಿ ಕೊಡಲು ನಾನು ಮತ್ತು ಪಿಡಬ್ಲೂ 3 ರವರು ಒಟ್ಟಿಗೆ ಹೋಗಿದ್ದೆವು ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿ ನಂಃ1 ರಿಂದ 8 ಮತ್ತು 19 ರಿಂದ 23 ಇವರ ಕುಟುಂಬಕ್ಕೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ.

4. ನನಗೆ ಓದಲು ಬರೆಯಲು ಬರುವುದಿಲ್ಲ. ಬಸವರಾಜ ಅವರ ಕಾಕಾ ಅವರ ವಿರುದ್ಧ ಈ ದಾವೆ ದಾಖಲಿಸಿದ್ದಾರೆ. ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಸರ್ವೆ ನಂಬರಃ 53/1, 55/1 ಮತ್ತು ನವಲೂರಿನಲ್ಲಿರುವ ಮನೆ ಮತ್ತು ಏರಿಭೂಮಿ ಇರುತ್ತದೆ. ಮನೆ ಮತ್ತು ಏರೆಭೂಮಿಯ ಸುತ್ತುಗಳ ನಂಬರನ್ನು ನಾನು ಬರೆಸಿಲ್ಲ. ವಾದಿಯು ವಾದ ಪತ್ರದಲ್ಲಿ ಏನು ಮಾಗಣಿ ಮಾಡಿದ್ದಾನೆ ಎಂದು ನನಗೆ ಗೊತ್ತಿಲ್ಲ.

ಪಿ.ಡಬ್ಲೂ

5. ವಾದಿ ಏನು ಸಾಕ್ಷಿ ಹೇಳಲು ಹೇಳಿದ್ದಾರೆ ಅದನ್ನು ಹೇಳುತ್ತಿದ್ದೇನೆ ಎಂದರೆ ಸರಿ. ನನಗೆ ದಾವೆಯ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ವಾದಿ ನನಗೆ ಹೇಳಿದ್ದಾರೆ. ವಾದಿ ನಮಗೆ ತುಂಬಾ ಬೇಕಾದವರು ಎಂದರೆ ಸರಿ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಪಿಡಬ್ಲೂಃ3 ಮತ್ತು ವಾದಿ ಸೋರಿಕೊಂಡು ಈ ಖೊಟ್ಟಿ ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**(ಪ್ರತಿವಾದಿ ನಂಬರ 19, 20 ಮತ್ತು 23 ಪರ ವಕೀಲರು ಉಳಿದ ಪ್ರತಿವಾದಿಗಳ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.** )

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ರಂಗಸ್ವಾಮಿ ಜೆ)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.